# ವಚನ ಸಾಹಿತ್ಯ: ಮಾನವ ಮೌಲ್ಯಗಳ ಪ್ರತಿಬಿಂಬ

ಗೌಡ. ಎಂ.ಟಿ.

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜ್ಯೋತಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್, ತಾತಗುಣಿ, ಬೆಂಗಳೂರು.

DOI: https://doi.org/10.5281/zenodo.15490961

## ABSTRACT:

ವಚನವೆಂಬುದು ಕೇವಲ ಸಾಹಿತ್ಯ ಪ್ರಕಾರವಲ್ಲ ಅದು ಒಂದು ಚಳುವಳಿ ಕೂಡ ಆಗಿದೆ. ಅದನ್ನು ಸಮಾಜೋ ಧಾರ್ಮಿಕ ಚಳುವಳಿ, ಕಾಯಕ ಜೀವಿಗಳ, ಚಳುವಳಿ ಪರಿಪೂರ್ಣ ಚಳುವಳಿ ಎಂದು ಬಗೆಬಗೆಯಾಗಿ ಕನ್ನಡ ವಿದ್ವಾಂಸರು ಅದರ ಸ್ವರೂಪ ಮಹಿಮೆಯನ್ನು ಬಣ್ಣಿಸಿದ್ದಾರೆ. ವಚನ ಸಾಹಿತ್ಯ ಇಡೀ ಭಾರತೀಯ ಭಾಷೆಗಳಲ್ಲಿಯೇ ವಿಶಿಷ್ಟವಾದುದು. ಕನ್ನಡ ಸಾಹಿತ್ಯವು ವಿಶ್ವ ಸಾಹಿತ್ಯಕ್ಕೆ ನೀಡಿದ ಕೊಡುಗೆ ಆದಾಗಿದೆ ಎಂದರೂ ನಡೆಯುತ್ತದೆ.

ಮಾನವ ಕುಲದ ಸರ್ವಾಂಗೀಣ ವಿಕಾಸಕ್ಕಾಗಿ ಶ್ರಮಿಸಿದ ಮಹಾತ್ಮರಾದ ಶಿವಶರಣರು ಅನನ್ಯ ಕೊಡುಗೆ ನೀಡಿರುವ ಜಗತ್ತಿನ ಅಪರೂಪದ ಸಾಹಿತ್ಯ ವಚನಗಳು. ವಚನಗಳು ಎಂದಾಕ್ಷಣ ನೆನಪಾಗುವುದೇ ಶಿವಶರಣರು. ಶರಣ ಪಂಥಕ್ಕೆ ಭಕ್ತಿಯ ಶಕ್ತಿಯೇ ಕೇಂದ್ರ ಬಿಂದು. ವಚನ ಸಾಹಿತ್ಯವು ಸವಿಸ್ತಾರವಾದ ಸಮುದ್ರದ ಆಳದಲ್ಲಿನ ಮುತ್ತು, ರತ್ನಗಳನ್ನು ಹೆಕ್ಕಿ ಅಳೆದು, ತೂಗಿ ಸಂಭ್ರಮಿಸಿ, ಅನುಭವಿಸಬೇಕು.

ವಚನಗಳಿಂದ ನಾವು ಜೀವನದಲ್ಲಿ ನೈತಿಕವಾಗಿ ಬದುಕುವುದನ್ನು ಅರಿಯಬಹುದು. ವಚನ ಎನ್ನುವ ಪದದಲ್ಲೇ ಮೌಲ್ಯವಿದೆ. ವಚನ ಎಂದರೆ ಸಂಸ್ಕೃತದಲ್ಲಿ ಮಾತು, ಮಾತನಾಡುವುದು, ವ್ಯಕ್ತಪಡಿಸುವುದು ಇತ್ಯಾಧಿ ಅರ್ಥಗಳಿವೆ. ಮುಖ್ಯವಾಗಿ ವಚನ ಎಂದರೆ ಪ್ರಮಾಣ, ಆಣೆ ಎಂತಲೂ ಅರ್ಥವಿದೆ. ಬಸವಣ್ಣ ಮುಂತಾದ ವಚನಕಾರರಲ್ಲಿ ವಚನ ಎಂಬ ಮಾತು ಬಳಕೆಯಾಗಿದೆ.

ಅನ್ಯರ ವಚನವ ಕೊಂಡಾಡಲು ಕರ್ಮ ಬಿಡದು/ಮೃದು ವಚನ ಸಕಲ ಜಪಂಗಳಯ್ಯ ಇತ್ಯಾಧಿ ಉಕ್ತಿಗಳಿವೆ.

ಮಾನವ ಸಂಕಲ್ಪ ಸಿದ್ಧಿಗಾಗಿ ಕೈಗೊಂಡ ಕಾರ್ಯಗಳನ್ನು ಕೈಗೂಡಿಸುವಂತೆ ಮಾಡುವ ಮೌಲ್ಯಗಳು ವಚನಗಳಲ್ಲಿವೆ. ಜೀವನ ಮೌಲ್ಯಗಳ ಉದ್ದೇಶವೇ ಸಮಾಜದ ಹಿತವನ್ನು ಕಾಪಾಡುವುದು. ಇಂತಹ ವಚನಗಳಿಂದ ಜೀವನಕ್ಕಾಗಿ ಮೌಲ್ಯಗಳನ್ನೇ ವಚನಕಾರರೇ ಹೇಳಿದ್ದಾರೆ. ಜೀವನ ಮೌಲ್ಯ ಎಂದರೇ ತನ್ನ ಸ್ವಾರ್ಥವನ್ನು ಬಿಟ್ಟು ಸ್ವಲ್ಪ ಮಟ್ಟಿಗಾದರೂ ಇತರರ ಕಡೆಗೂ ಗಮನಿಸುವುದು ಮತ್ತು ಆ ನಿಟ್ಟಿನಲ್ಲಿ ಕರ್ತವ್ಯ ನಿಷ್ಠೆಯನ್ನು ಹೆಚ್ಚಿಸುವುದೇ ಆಗಿದೆ.

## KEYWORDS:

ದೈವಿಕ ಅನುಭವ, ಭಕ್ತಿ, ಕಾಯಕ, ದಾಸೋಹ, ಸತ್ಯ, ಪ್ರಾಮಾಣಿಕತೆ, ನೈತಿಕ ಮೌಲ್ಯ.

**ಸತ್ಯವನ್ನು ನುಡಿ:**

ಸತ್ಯಮೇವ ಜಯತೆ ಎಂಬ ಮಾತನ್ನು ನಾವು ಋಗ್ವೇದದಲ್ಲಿ ಕಾಣುತ್ತೇವೆ ಸತ್ಯ ಎಂದಿಗೂ ಸತ್ಯವೇ ಆಗಿರುತ್ತದೆ. ಸತ್ಯದ ನಡೆಯಿಂದ ನಡೆಯುವವರು ಎಂದೆಂದಿಗೂ ಶ್ರೇಷರು ಅದಕ್ಕೆಂದು ಬಸವಣ್ಣನವರು ಸತ್ಯ ನುಡಿವುದೇ ದೇವಲೋಕ ಎಂದಿರುವುದು. ಸತ್ಯ ದೇವ ಲೋಕಕ್ಕೆ ಸಮಾನ 'ಆಚಾರವೇ ಸ್ವರ್ಗ' ಎಂದು ಹೇಳಿರುವುದು ಸತ್ಯದಷ್ಟೇ ಸಮಾನ.

**ಸತ್ಯ ನುಡಿಯುವುದೇ ದೇವಲೋಕ**
**ಮಿಥ್ಯ ನುಡಿಯುವುದೇ ಮರ್ತ್ಯ ಲೋಕ**
**ಆಚಾರವೇ ಸ್ವರ್ಗ, ಅನಾಚರವೇ ನರಕ**
**ಕೂಡಲ ಸಂಗಮದೇವ.**

**ನಡತೆ/ವರ್ತನೆ ಸಭ್ಯತೆಯಿಂದ ಕೂಡಿರಲಿ:**

ಶಿಕ್ಷಣ ಮನುಷ್ಯನ ವರ್ತನೆಯನ್ನು ಪರಿವರ್ತನೆ ಮಾಡುವುದಾಗಿದ್ದರೆ ಅದು ನಿಜವಾದ ಕಲಿಕೆ ಆದರೆ ಇಂದು ಶಿಕ್ಷಣದಲ್ಲಿ ನೈತಿಕತೆಗೆ ಬೆಲೆಯಿಲ್ಲದಂತಾಗಿದೆ. ನಾವು ಕೇವಲ ಅಂಕಗಳ ಹಿಂದೆ ಬಿದ್ದಿದ್ದೇವೆ ಮಕ್ಕಳನ್ನು ಅಂಕಗಳಿಗೆ ಅಂಟಿಸಿಬಿಟ್ಟಿದ್ದೇವೆ. ಆ ಮಕ್ಕಳು ಕಲಿತ ನಂತರ ನಮ್ಮ ಭಾರತೀಯತೆಯ ಮೌಲ್ಯ ಜೀವನ ಮರೆತು ಬಾಹ್ಯವನ್ನು ಅಪ್ಪಿಕೊಂಡು ಹೋಗಿಬಿಡುತ್ತವೆ. ಮಕ್ಕಳು ನಮ್ಮ ಕೈತಪ್ಪುವ ಮುನ್ನ ಅವರಿಗೆ ಜೀವನ ಮೌಲ್ಯವನ್ನು ಬಿತ್ತಬೇಕಾದ ಅಗತ್ಯವಿದೆ. ಮಾತೇ ಮೃತ್ಯು, ಮಾತೇ ಮುತ್ತು. ಆದ್ದರಿಂದ ನಮ್ಮ ವರ್ತನೆ ಸದಾ ವಿನಯದಿಂದ ಕೂಡಿರಬೇಕು, ತಾಳಿದವನು ಬಾಳಿಯಾನು ಎಂಬಂತೆ ಗುರು ಹಿರಿಯರಿಗೆ ನಮಸ್ಕಾರ ಮಾಡುವುದನ್ನು ನಾವು ಕಲಿಯಬೇಕು. ನಂತರ ಇತರರಿಗೆ ಕಲಿಸಬೇಕು.

**ನುಡಿದರೆ ಮುತ್ತಿನ ಹಾರದಂತಿರಬೇಕು**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು**
**ನುಡಿದರೆ ಸ್ಪಟಿಕದ ಸಲಾಕೆಯಂತಿರಬೇಕು**
**ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು**
**ನುಡಿಯೊಳಗಾಗಿ ನಡೆಯದಿದ್ದಡೆ**
**ಕೂಡಲ ಸಂಗಮದೇವನೆಂತೊಲಿವನಯ್ಯಾ**

ಬಸವಣ್ಣನವರು ನಮ್ಮ ನಡೆಯ ಬಗ್ಗೆ ಮಾರ್ಮಿಕವಾಗಿ ಹೇಳಿದ್ದಾರೆ. ಮಾತಿನಲ್ಲಿ ಪಾರದರ್ಶಕತೆ ಇರಬೇಕು. ಜಗದಲ್ಲಿ ಯಾರು ಪಾರದರ್ಶಕವಾಗಿ ಮಾತಾನಾಡುವವರೋ ಅವರನ್ನು ಗೆಲ್ಲಲು ಯಾರಿಂದ ತಾನೆ ಸಾಧ್ಯ ಮಾತುಗಳನ್ನು ಆಡಿದರೆ ದೇವರು ಸಹ ಮೆಚ್ಚುವಂತಿರಬೇಕು.

**ಸಮಾಧಾನಿ:**

ದಾನಗಳಲ್ಲಿ ಸಮಧಾನವೇ ಅತ್ಯಂತ ಶ್ರೇಷ್ಠದಾನ ಲೋಕದಲ್ಲಿ ಕೆಟ್ಟವರನ್ನಷ್ಟೇ ಅಲ್ಲ ಒಳ್ಳೇಯ ಕಾರ್ಯಗಳನ್ನು ಮಾಡಿದವರನ್ನು ಆಡಿಕೊಳ್ಳುವವರಿದ್ದಾರೆ. ಅದಕ್ಕೆಂದು ಶರಣರು ಇದಕ್ಕು ಕೊಡುವ ಉತ್ತರ ಯಾರೂ ಏನೇ ಆಡಿಕೊಂಡರು ಅದಕ್ಕೆ ಕಿವಿಗೊಡದೆ ಶುದ್ಧ ಕಾಯಕವ ಮಾಡುತ್ತಿರಬೇಕು ಕಾಯಕದಿಂದಲೇ ಉತ್ತರ ಕೊಡಬೇಕು. ಸಮಚಿತ್ತದಿಂದ ಸಮಜ್ಞಾನದಿಂ ತಿಳಿದು ಬದುಕು ನಡೆಸುವವನು ಬಾಳಿಯಾನು.

**ಇಂದಿಂಗೆಂತು ನಾಳಿಗೆ ತೆಂದು ಚಿಂತಿಸಲೇಕೆ?**
**ತಂದಿಕ್ಕುವ ಶಿವಂಗೆ ಬಡತನವೆ ರಾಮನಾಥ**
**ಬಡತನ ಬಂದಿತೆಂದು ಚಿಂತಸಬೇಡ, ಚಿತೆ ಹೆಣವನ್ನು**
**ಸುಟ್ಟರೆ, ಚಿಂತೆ ಜೀವಂತೆ ದೇಹವನ್ನೇ ಸುಡುತ್ತದೆ.**

ನಾಳೆಯ ಚಿಂತೆ ಮಾಡದೆ ಸಮಾಧಾನದಿಂದ ಇರಬೇಕು ಅದಕ್ಕೆಂದು ಶರಣರು ಈ ರೀತಿ ಹೇಳಿದ್ದಾರೆ.

**ಕೋಪ:**

ಕೋಪದಲ್ಲಿ ಕೋಯ್ದು ಮೂಗು ಮತ್ತೆ ಬಂದಿತೆ? ಎಂಬ ಗಾದೆಯನ್ನು ಮರೆಯಬಾರದು. ಇದಕ್ಕೆಂದೇ ನಮ್ಮ ಶರಣರು ವಚನಗಳಲ್ಲಿಯೇ ಸಲಹೆ ಸೂಚನೆಗಳನ್ನು ನೀಡಿದ್ದಾರೆ.

**ತನಗೆ ಮುನಿವರಿಗೆ ತಾಮುನಿಲೇಕಯ್ಯಾ**
**ತನಗಾದ ಆಗೇನು ಅವರಿಗಾದ ಚೇಗೆಯೇನು**
**ತನುವಿನ ಕೋಪ ತನ್ನ ಹಿರಿತನದಕೇಡು**
**ಮನದ ಕೋಪ ತನ್ನ ಅರಿವಿನ ಕೇಡು**
**ಮನೆಯೊಳಗಿನ ಕಿಚ್ಚು ಮನೆಯಸುಟ್ಟಲ್ಲದೆ**
**ನೆರಮನೆಯ ಸುಡದು ಕೂಡಲಸಂಗಮದೇವಾ**

ಬಸವಣ್ಣನವರು ಮೇಲಿನ ವಚನಗಳಲ್ಲಿ ಕೋಪ ಮೊದಲು ನಮ್ಮನೇ ದಯಿಸುತ್ತದೆ. ತಾಳ್ಮೆ ಬಹಳ ಮುಖ್ಯ ಎಂದು ಹೇಳಿದ್ದಾರೆ.

**ಬೆಟ್ಟದ ಮೇಲೊಂದು ಮನೆಯ ಮಾಡಿ,**
**ಮೃಗಗಳಿಗಂಜಿದಡೆಂತಯ್ಯ?**
**ಸಮುದ್ರದ ತಡಿಯಲೊಂದು ಮನೆಯ ಮಾಡಿ**
**ನೊರೆತೆರೆಗಳಿಗಂಜಿದಡೆಂತಯ್ಯಾ**
**ಸಂತೆಯೊಳಗೊಂದು ಮನೆಯ ಮಾಡಿ**
**ಶಬ್ದಕ್ಕೆ ನಾಚಿದಡೆಂತಯ್ಯ**
**ಚೆನ್ನ ಮಲ್ಲಿಕಾರ್ಜುನದೇವಾ ಕೇಳಯ್ಯಾ**
**ಈ ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೇಗಳು ಬಂದಡೆ**

**ಮನದಲ್ಲಿ ಕೋಪವ ತಾಳದೇ ಸಮಾದಾನಿಯಾಗಿರಬೇಕು.**

ತಾಳ್ಮ ಇದ್ದರೆ ಜಗತ್ತನ್ನೇ ಗೆಲ್ಲಬಹುದು ಬುದ್ಧ ಇದಕ್ಕೆ ಸೂಕ್ತ ಉದಾಹರಣೆ. ಮನುಷ್ಯನಿಗೆ ಬರುವ ಸಂಕಷ್ಟಗಳಿಗೆ ನಿಂದನೆಯ ಮಾತುಗಳಿಗೆ ಅಂಜದೆ ಅಳುಕದೆ ಧೈರ್ಯವಾಗಿ ಬದುಕಬೇಕೆಂದು ಹಾಗೂ ಯಾವುದೇ ಕಾರಣಕ್ಕೂ ತಾಳ್ಮೆ ಕಳೆದುಕೊಳ್ಳಬಾರದು. ಕೋಪದಿಂದ ಎಷ್ಟೋ ಸಾಮ್ರಾಜ್ಯಗಳು ಹಾಳಾಗಿಹೋಗಿದ್ದಾವೆ ಎಂಬುದನ್ನು ಮರೆಯಬಾರದು.

**ನಿಷ್ಕಪಟತೆ:**

ಕಪಟತನ, ಮೊಸ ಒಳಿತಲ್ಲ, ಒಳಗೊಂದು ಹೊರಗೊಂದು ನಡೆ ಬಹುಕಾಲ ನಡೆಯದು ಕಪಟತನದಿಂದ ರಾಜ್ಯ ಪಡೆದವರೆಲ್ಲ ನಶಿಸಿ ಹೋಗಿದ್ದಾರೆ. ನುಡಿಗೆ ತಕ್ಕ ನಡೆ ಇರಬೇಕೇಂದು ಬಸವಣ್ಣ ಅವರು ತಮ್ಮ ವಚನದಲ್ಲಿ ಹೇಳಿರುವುದನ್ನು ಇಲ್ಲಿ ಕಾಣಬಹುದು.

**ದಾನ:**

ಪ್ರಪಂಚ ನನಗೆಲ್ಲ ಕೊಟ್ಟಿರುವಾಗ, ಎಲ್ಲವನ್ನು ಇಲ್ಲಿಂದಲ್ಲೇ ಪಡೆದಿರುವಾಗ ನಾವು ಇಲ್ಲಿಗೆ ಕೊಟ್ಟು ಹೋಗುವುದರಲ್ಲಿ ತಪ್ಪೇನಿದೆ.

ಮನುಷ್ಯ ಒಬ್ಬನ್ನು ಬಿಟ್ಟು ಉಳಿದ ಯಾವ ಜೀವಿಯೂ ಸಂಗ್ರಹ ಗುಣ ಹೊಂದಿಲ್ಲ. ಪ್ರಾಣಿ ಪಕ್ಷಿಗಳನ್ನು ನೋಡಿ ನಾವು ದಾನ ಮಾಡುವುದನ್ನು ಕಲಿಯಬೇಕಾದ ಅಗತ್ಯವಿದೆ. ಹಂಚಿ ತಿನ್ನುವುದರಲ್ಲಿ ನರನಿಗಿಂತ ಕಾಗೆ ಕೋಳಿಗಳೇ ಮೇಲು ಎಂದು ಬಸವಣ್ಣನವರು ವಚನಗಳಲ್ಲಿ ತಿಳಿಸಿದ್ದಾನೆ.

**ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವನು?**
**ಕೋಳಿಯೊಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವೆ?**
**ಶಿವಭಕ್ತನಾಗಿ ಭಕ್ತಪಕ್ಷವಿಲ್ಲದಿದ್ದರೆ ಕಾಗೆ ಕೋಳಿಯಿಂದ**
**ಕರಕಷ್ಟ ಕೂಡಲಸಂಗಮದೇವಾ.**

ಶರಣರು ಹಾಕಿಕೊಟ್ಟ ಮಾರ್ಗವೇನು? ದಾಸೋಹವ ಮಾಡಿ ತಾನು ಉಣ್ಣಬೇಕು. ಇದಕ್ಕಿಂತ ಶ್ರೇಷ್ಠತತ್ತ್ವ ಮತ್ತೆಲ್ಲಿದೆ. ಇದ್ದುದರಲ್ಲಿ ಹಂಚಿಕೊಂಡು ತಿನ್ನುವ ಗುಣ ನಮ್ಮಲ್ಲಿ ಬರಲಿ ಮತ್ತೆ ದಾನ ಮಾಡಿರುವುದನ್ನು ಹೇಳಿಕೊಳ್ಳಬಾರದು. ಕೊಟ್ಟು ಕುದಿಯಲು ಬೇಡ' ಎಂಬ ಸರ್ವಜ್ಞನ ಮಾತನ್ನು ಮನದಲ್ಲಿಟ್ಟು ನೆನೆಯಬೇಕು

**ಆತ್ಮಶುದ್ದಿ:**

**ಲೋಕದ ಡೊಂಕ ನೀವೇಕೆ ತಿದ್ದುವಿರಿ**
**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ**
**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ**

**ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವಾ**

ಬಸವಣ್ಣನವರು ಲೋಕದ (ಜನರ) ತಪ್ಪು/ದೋಷಗಳನ್ನು(ಡೊಂಕು) ನಿವೇಕೆ ತಿದ್ದುತ್ತೀರಿ, ನಿಮ್ಮ ನಿಮ್ಮ ತನುವ (ದೇಹ)ಸರಿಪಡಿಸಿಕೊಳ್ಳಿ (ಸಂತೈಸಿಕೊಳ್ಳಿ ), ನಿಮ್ಮ ನಿಮ್ಮ ಮನಸ್ಸನ್ನು ಸರಿಪಡಿಸಿಕೊಳ್ಳಿ. ಬೇರೆಯವರ (ನೆರಮನೆಯ) ತಪ್ಪುಗಳಿಗಾಗಿ ಚಿಂತಿಸುವವರನ್ನು/ವ್ಯರ್ಥಪಡುವವರನ್ನು (ಅಳುವವರು) ಕೂಡಲಸಂಗಮದೇವ ಮೆಚ್ಚುವುದಿಲ್ಲ ಇದಿಷ್ಟು ವಚನದ ಸಾರಾಂಶ.

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,**
**ಮುನಿಯ ಬೇಡ, ಅನ್ಯರಿಗೆ ಅಸಹ್ಯಪಡಬೇಡ,**
**ತನ್ನ ಬಣ್ಣಿಸಬೇಡ, ಇದಿರ ಅಳಿಯಲು ಬೇಡ,**
**ಇದೇ ಅಂತರಂಗಶುದ್ಧಿ! ಇದೇ ಬಹಿರಂಗ ಶುದ್ಧಿ!**
**ಇದೆ ನಮ್ಮ ಕೂಡಲಸಂಗಮದೇವನೊಲಿಸುವ ಪರಿ**

ಬಸವಣ್ಣನವರ ಇದೊಂದು ವಚನ ಜೀವನ ಸಂದೇಶಗಳನ್ನು ಸಾರುತ್ತದೆ.

ಇಂದಿನ ಸಮಾಜದಲ್ಲಿ ಎಷ್ಟೊಂದು ಕಾನೂನುಗಳು ಇದ್ದರೂ ತಪ್ಪಿ ನಡೆಯುವ ನಾವು, ಬಸವಣ್ಣನವರ ಈ ಒಂದು ವಚನವನ್ನು ಪಾಲಿಸಿದರೆ ಜೀವಿತಾವಧಿಯಲ್ಲಿ ಎಂದು ಕೋರ್ಟು, ಕಛೇರಿಎಂದೂ ಹೋಗುವ ಅಲೆಯುವ ಅವಶ್ಯಕತೆಯಿಲ್ಲ ಎಂದು ತಿಳಿಯಬಹುದು.

**ಸಜ್ಜನರ ಸಂಗ ಮಾಡು:**

ಉತ್ತಮರ ಸಂಗವನ್ನು ಮಾಡಬೇಕು, ಇಂದು ಸಂಗದಿಂದಲೇ ಭಂಗಗಳು ಉಂಟಾಗಿ ವಿರಸ ಗಳಿಂದ ಸಂಘರ್ಷಗಳು ಹೆಚ್ಚಾಗಿದೆ. ಸಜ್ಜನರ ಸಂಗಲೇಸು ಎಂಬುದನ್ನು ಶರಣರು ವಚನ ರಚಿಸಿದ್ದಾರೆ.

**ಅರಿಯದವರೊಡನೆ ಸಂಗವ ಮಾಡಿದಡೆ**
**ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ**
**ಬಲ್ಲವರೊಡನೆ ಸಂಗವ ಮಾಡಿದಡೆ ಬ**
**ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಡಂತೆ**
**ಚೆನ್ನಮಲ್ಲಿಕಾರ್ಜುನಯ್ಯಾ.**
**ನಿಮ್ಮ ಶರಣರ ಸಂಗವ ಮಾಡಿದಡೆ ಕರ್ಪೂರದ**
**ಗಿರಿಯನುರಿಕೊಂಬಂತೆ.**

ಅರಿಯದವರ ಸಂಗವ ಮಾಡಿದರೆ ಏನಾಗುತ್ತದೆ? ಕಲ್ಲುಗಳೆರಡನ್ನು ಉಜ್ಜಿದರೆ ಬೆಂಕಿ ಹೊತ್ತಿಕೊಳ್ಳುವಂತೆ ಅರಿಯದವರ ಸಂಗ, ಯಾರು ಅರಿತವರೋ ಅವರ ಸಂಗವ ಮಾಡಿದರೆ ಏನಾಗುತ್ತದೆ? ಮೊಸರನ್ನ ಕಡೆದಾಗ ಶುದ್ದ ಬೆಣ್ಣೆಯ ಬರುವಂತೆ ಅರಿತವರ ಸಂಗ ಶರಣರ ಸಂಗವಂತೂ ಕರ್ಪೂರಗಿರಿಯನ್ನು ಉರಿ ಸುತ್ತಿಕೊಂಡಂತೆ ಎಂಬುದನ್ನು ಅಕ್ಕಮಹಾದೇವಿ ಈ ವಚನದಲ್ಲಿ ಹೇಳಿದ್ದಾಳೆ.

**ನಿಷ್ಠೆ:**

**ನಿಷ್ಠೆಯುಳ್ಳ ಭಕ್ತನಟ್ಟಡವಿಯಲ್ಲಿದ್ದಡೇನು?**
**ಅದು ಪಟ್ಟಣವೆಂದೆನಿಸೂದು!**
**ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದರೂ**
**ಅದು ನಟ್ಟಡವಿ ಕಾಣಾ !ರಾಮನಾಥ.**
**– ಜೇಡರ ದಾಸಿಮಯ್ಯ**

ವಚನದಲ್ಲಿ ನಿಷ್ಠೆ ಪ್ರಾಮಾಣಿಕತೆಯ ಫಲವನ್ನು ಅರಿಯಬಹುದಾಗಿದೆ. ಪ್ರಾಮಾಣಿಕಯಿಲ್ಲದಿದ್ದರೆ ಆತ ಪಟ್ಟಣದಲ್ಲಿದ್ದರೇನು? ಪ್ರಯೋಜನಕ್ಕೆ ಬರದು. ಒಂದು ರಾಷ್ಟ್ರ ಸದೃಢ ರಾಷ್ಟ್ರವಾಗಬೇಕಾದರೆ ಪ್ರಧಾನವಾಗಿ ನಿಷ್ಠೆಯಿಂದ ನಡೆದರೆ, ಸಶಕ್ತ ರಾಷ್ಟ್ರವಾಗಲು ಸಾಧ್ಯ.

ಶರಣ ಮತ್ತು ಶರಣನ ಮನ ನಿಷ್ಠೆಯ ಪ್ರತೀಕವಾಗಿರಬೇಕು. ಶರಣ ಎಂದರೆ ಬರಿ ವಚನಕಾರರಲ್ಲ. ನಾವುಗಳೂ ಕೂಡ ಸಹಜತೆಯಿಂದ ಪ್ರಾಮಾಣಿಕತೆಯಿಂದ ನಡೆದುಕೊಳ್ಳಬೇಕು. ನಿಷ್ಠೆ ಸತ್ಯದ ಮತ್ತೊಂದು ರೂಪ.

ವಚನಕಾರರು ತಮ್ಮ ಜೀವನದಲ್ಲಿನ ಅನುಭವ ಸತ್ಯವನ್ನು ತಿಳಿಸಿದ್ದಾರೆ. ಸದಾ ಕಾಲ ಕಾಯಕ ನಿರತರಾಗಿರುವವರು ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಸಮಾಜದ ಹಿತಕ್ಕಾಗಿ ಆದರ್ಶ ಮೌಲ್ಯಯುತವಾದ ಬದುಕನ್ನು ಕಟ್ಟಿಕೊಂಡವರು.

ಆತ್ಮೋದ್ಧಾರದ ಹೆದ್ದಾರಿ ಸರ್ವರ ಸ್ವತ್ತಾಗುವಂತೆ ಜನ ಜಾಗೃತಿ ಆಗಬೇಕೆಂಬುದು ವಚನಕಾರರ ಹೆಗ್ಗುರಿ. ಆ ಬಾಲವೃದ್ಧರಾದ ಗಂಡು, ಹೆಣ್ಣುಗಳಿಗೆ ಅರ್ಥವಾಗಬೇಕು ಅನುಕರಣ ಯೋಗ್ಯವಾಗಬೇಕು, ಅನುಸರಣ ಸಾಧ್ಯವಾಗಬೇಕು. ಆದ್ದರಿಂದ ತಿಳಿಗನ್ನಡದ ತೊಡಿಗೆಯುಟ್ಟು ಪಂಡಿತ ಪಾಮರರಿಬ್ಬರನ್ನೂ ಏಕ ಕಾಲದಲ್ಲೇ ಮೆಚ್ಚಿಸಬಲ್ಲ ನಿತ್ಯ ಸತ್ಯದ ದೇವ ಗಂಗೆ ಈ ವಚನಗಳ ಮೂಲಕ ತಿಳಿದುಬಂದಿದೆ, ಇಲ್ಲಿ ಪಾಂಡಿತ್ಯಕ್ಕಲ್ಲ ಪುರಸ್ಕಾರ, ಅನುಭಾವಿಗಳ ಹೃದಯದಿಂದ ಪುಟಿದು ಬರುವ ಅನುಭವೈಕ್ಯ ಧರ್ಮದರ್ಶನಕ್ಕೆ ಆಧ್ಯಾತ್ಮ, ಧರ್ಮ, ನೀತಿ ಇವುಗಳ ನಿರೂಪಣೆಯಿಂದ ಮಾನವನನ್ನು ದೇವನನ್ನಾಗಿ ಮಾಡಬಲ್ಲ ಮಹೋನ್ನತ ಗುಣವಿರುವುದರಿಂದಲೆ ಇವು ಅಮರವಾಗಿವೆ. ಈ ಅನುಭವಾಮೃತ ಚಿಲುಮೆಯಿಂದ ನೀರು ಉಕ್ಕಿದಂತೆ ಶರಣರ ಬಾಯಿಂದ ಹೊರಹೊಮ್ಮಿ ಸಾರವತ್ತಾದ, ಸೂತ್ರ ಪ್ರಾಯವಾದ, ಅರ್ಥಗರ್ಭಿತವಾದ ವಚನರೂಪದಿಂದ ಹರಿದು ಬಂದಿದೆ.

**ಪರಾಮರ್ಶನ ಗ್ರಂಥಗಳು:**

1. ಶಾಮರಾಯ ತ.ಸು., (2012), ಕನ್ನಡ ಸಾಹಿತ್ಯ ಚರಿತ್ರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ಮುಗಳಿ ರಂ.ಶ್ರೀ. (2014), ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು.
3. ಶ್ರೀನಿವಾಸಮೂರ್ತಿ ಎಂ.ಆರ್., (2023), ವಚನ ಧರ್ಮಸಾರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
4. ಕನ್ನಡ ಪುಸ್ತಕ ಪ್ರಾಧಿಕಾರ, (2021), ಸಮಗ್ರ ವಚನ ಸಾಹಿತ್ಯ ಸಂಪುಟಗಳು: 1–15, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
5. ಚಿದಾನಂದಮೂರ್ತಿ ಎಂ., (2015), ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ: ವಚನ ಸಾಹಿತ್ಯ, ಸಪ್ನ ಬುಕ್ ಹೌಸ್, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.